# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 322 (314) |
| ಉತ್ತರಿಸುವ ದಿನಾಂಕ | 03-02-2021 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಆಸ್ತಿ ಖರೀದಿ ಮತ್ತು ಮಾರಾಟದ ಎಷ್ಟು ಪ್ರಕ್ರಿಯೆಗಳು ನೋಂದಣಿಯಾಗಿವೆ; ವಿಭಾಗವಾರು ಮಾಹಿತಿ ನೀಡುವುದು ಇದರಿಂದ ಸಂಗ್ರಹವಾದ ರಾಜಸ್ವ ಮೊತ್ತವೆಷ್ಟು; | ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಿದೆ. |
| (ಆ) | ಕೇಂದ್ರ ಮೌಲ್ಯ ಮಾಪನ ಸಮಿತಿಯಿಂದ ನಿಗದಿ ಪಡಿಸಿದ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ನೋಂದಣಿ ಮಾಡಿಸಿಕೊಳ್ಳುವ ಅಧಿಕಾರ ಉಪ ನೋಂದಣಾಧಿಕಾರಿಗಳಿಗೆ ಇದೆಯೇ; ಬೆಳಗಾವಿ ಉಪ ನೋಂದಣಾಧಿಕಾರಿಯವರು 2018ರಲ್ಲಿ ಸರ್ವೆ ಸಂ 3928, 3929, 3929/1, 3929/2 ಮತ್ತು 3929/5ನ್ನು ಕಡಿಮೆ ದರಕ್ಕೆ ನೋಂದಣಿ ಮಾಡುವ ಮೂಲಕ ಸರಕಾರಕ್ಕೆ ರೂ.9.56 ಕೋಟಿ ಮುದ್ರಾಂಕ ಶುಲ್ಕ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೇಂದ್ರ ಮೌಲ್ಯ ಮಾಪನ ಸಮಿತಿಯಿಂದ ನಿಗದಿ ಪಡಿಸಿದ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ನೋಂದಣಿ ಮಾಡುವ ಅಧಿಕಾರ ಉಪ ನೋಂದಣಾಧಿಕಾರಿಗಳಿಗೆ ಇರುವುದಿಲ್ಲ.<br>ಬೆಳಗಾವಿ ಉಪ ನೋಂದಣಾಧಿಕಾರಿಯವರು 2018ರಲ್ಲಿ ಸರ್ವೆ ಸಂ 3928, 3929, 3929/1, 3929/2 ಮತ್ತು 3929/5ನ್ನು ಕಡಿಮೆ ದರಕ್ಕೆ ನೋಂದಣಿ ಮಾಡುವ ಮೂಲಕ ಸರಕಾರಕ್ಕೆ ರೂ.9.56 ಕೋಟಿ ಮುದ್ರಾಂಕ ಶುಲ್ಕ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

.....2

| | | |
|---|---|---|
| (ಇ) | ಸರ್ಕಾರಕ್ಕೆ ನಷ್ಟವಾದ ರೂ.9.56 ಕೋಟಿ ಮುದ್ರಾಂಕ ಶುಲ್ಕವನ್ನು ಸಂಬಂಧಿತ ಅಧಿಕಾರಿಯಿಂದಲೇ ವಸೂಲಿ ಮಾಡಲು ಯಾವ ಕ್ರಮ ಕೈಗೊಂಡಿದೆ; ಸದರಿ ಅಧಿಕಾರಿಯನ್ನು ಅಮಾನತ್ತು ಮಾಡಲಾಗಿದೆಯೇ; ಈ ಕುರಿತು ಸರ್ಕಾರದ ನಿಲುವೇನು? | ಸರ್ಕಾರಕ್ಕೆ ನಷ್ಟವಾಗಿರುವ ಮುದ್ರಾಂಕ ಶುಲ್ಕ ರೂ.9.56 ಕೋಟಿ ಮೊತ್ತವನ್ನು ಸಂಬಂಧಿತ ಅಧಿಕಾರಿಯಿಂದಲೇ ವಸೂಲಿ ಮಾಡಲು ಆರೋಪಿತ ಅಧಿಕಾರಿಗೆ ಕರ್ನಾಟಕ ನೋಂದಣಿ ನಿಯಮಗಳು, 1965ರ ನಿಯಮ 170ರಡಿ ಸರ್ಕಾರಕ್ಕೆ ನಷ್ಟವಾಗಿರುವ ರಾಜಸ್ವವನ್ನು ಏಕೆ ವಸೂಲು ಮಾಡಬಾರದು ಹಾಗೂ ಅವರನ್ನು ಸರ್ಕಾರದ ಸೇವೆಯಿಂದ ಏಕೆ ಅಮಾನತು ಮಾಡಬಾರದು ಎಂಬ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸುವಂತೆ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಹಂತದಲ್ಲಿ ದಿನಾಂಕ: 30-01-2021ರಂದು ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿರುತ್ತದೆ (ಅನುಬಂಧ-2). |

**ಸಂಖ್ಯೆ:** ಕಂಇ-ಎಂಎಸ್‌ಎಸ್‌ಎ-40/2021

(ಆರ್ ಅಶೋಕ್)
ಕಂದಾಯ ಸಚಿವರು

ಅನುಬಂಧ-01

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

## 2018-19 ರಿಂದ 2020-21 ನೇ ಸಾಲಿನ ವರೆಗೆ ಬೆಂಗಳೂರು ನಗರದಲ್ಲಿ ನೋಂದಣಿಯಾದ ಕ್ರಯ ದಸ್ತಾವೇಜುಗಳು ಹಾಗೂ ಸಂಗ್ರಹಣೆಯಾದ ರಾಜಸ್ವದ ವಿವರ

(ರೂ ಕೋಟಿಗಳಲ್ಲಿ)

| | | 2018-19 | | 2019-20 | | 2020-21 (ಏಪ್ರಿಲ್ ರಿಂದ ಡಿಸೆಂಬರ್) | |
|---|---|---|---|---|---|---|---|
| ಕ್ರ ಸಂ | ಜಿಲ್ಲೆಯ ಹೆಸರು | ನೋಂದಣಿಯಾದ ಕ್ರಯ ದಸ್ತಾವೇಜುಗಳ ಸಂಖ್ಯೆ | ಸಂಗ್ರಹವಾದ ಒಟ್ಟು ರಾಜಸ್ವ | ನೋಂದಣಿಯಾದ ಕ್ರಯ ದಸ್ತಾವೇಜುಗಳ ಸಂಖ್ಯೆ | ಸಂಗ್ರಹವಾದ ಒಟ್ಟು ರಾಜಸ್ವ | ನೋಂದಣಿಯಾದ ಕ್ರಯ ದಸ್ತಾವೇಜುಗಳ ಸಂಖ್ಯೆ | ಸಂಗ್ರಹವಾದ ಒಟ್ಟು ರಾಜಸ್ವ |
| 1 | 2 | 3 | 4 | 5 | 6 | 7 | 8 |
| | ಬೆಂಗಳೂರು ನಗರ ಜಿಲ್ಲೆ | | | | | | |
| 1 | ಬಸವನಗುಡಿ | 34278 | 803.32 | 27215 | 743.59 | 15384 | 444.18 |
| 2 | ಗಾಂಧಿನಗರ | 35908 | 919.42 | 29310 | 876.78 | 14324 | 481.83 |
| 3 | ಜಯನಗರ | 38776 | 1237.19 | 36084 | 1400.20 | 18269 | 703.69 |
| 4 | ರಾಜಾಜಿನಗರ | 32813 | 743.28 | 27867 | 733.75 | 11460 | 371.40 |
| 5 | ಶಿವಾಜಿನಗರ | 46115 | 1952.45 | 41505 | 2033.88 | 24157 | 1238.88 |
| | ಬೆಂಗಳೂರು ನಗರ 5 ಜಿಲ್ಲಾ ನೋಂದಣಾಧಿಕಾರಿ ಕಛೇರಿ ಮೊತ್ತ | 187890 | 5655.65 | 161981 | 5788.20 | 83594 | 3239.98 |

ಅನುಬಂಧ-02

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: AUD/39/2018-19/ DC-01/18-19

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆಂಪೇಗೌಡ ರಸ್ತೆ , ಬೆಂಗಳೂರು–09
ದಿನಾಂಕ:30–01–2021.

<u>ಕಾರಣ ಕೇಳುವ ನೋಟೀಸು</u>

ವಿಷಯ: ಶ್ರೀ ವಿಷ್ಣುತೀರ್ಥ ಉಪನೋಂದಣಾಧಿಕಾರಿಗಳು, ಉ.ನೋ.ಕ ಬೆಳಗಾವಿ ರವರು ದಸ್ತಾವೇಜುಗಳನ್ನು ಅಪಮೌಲ್ಯಗೊಳಿಸಿ ನೋಂದಣಿ ಮಾಡಿ ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟು ಮಾಡಿರುವ ಬಗ್ಗೆ.

ಉಲ್ಲೇಖ:1. ಮಹಾಲೇಖಪಾಲರ ಪತ್ರ ಸಂಖ್ಯೆ: AG(E&RSA)/RS II/SD & RF/B/DC-01/2018-19/187 dt:09-01-2019.

2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:16–01–2019.

3. ಜಿ.ನೋ.ಕ ಬೆಳಗಾವಿ ರವರ ಪತ್ರ ಸಂಖ್ಯೆ:ಎಯುಡಿ/39/18–19/ ಡಿಸಿ–01/18–19, ದಿನಾಂಕ:16–01–2019.

4. ವಿಧಾನ ಪರಿಷತ್ತಿನ ಸಚಿವಾಲಯ ಸಂಖ್ಯೆ:ಕಪಿಪ:314:143 ನೇ ಅ. 2021, ದಿನಾಂಕ:23–01–2021.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಳಗಾವಿ ಉಪನೋಂದಣಿ ಕಛೇರಿಯನ್ನು ಮಹಾಲೇಖಪಾಲರು ಬೆಂಗಳೂರು ಇವರು 2018–19 ನೇ ಸಾಲಿಗೆ ತಪಾಸಣೆ ನಡೆಸಿ ಕಂಡಿಕೆ ಸಂಖ್ಯೆ: I/IIA/2015-18, ರಲ್ಲಿ 09 ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ರಾಜಸ್ವ ನಷ್ಟ ಉಂಟಾಗಿರುತ್ತದೆ ಎಂದು ಆಕ್ಷೇಪಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಂಡಿಕೆ ಸಂಖ್ಯೆ: | ಜೆಡಿಎ ದಸ್ತಾವೇಜು ಸಂಖ್ಯೆ | ಕೊರತೆ ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | I/IIA/2015-18 | 3699/15-16 | 901.35 |
| 2 | | 3727/15-16 | 151.99 |
| 3 | | 3728/15-16 | 39.78 |
| 4 | | 3730/15-16 | 36.22 |
| 5 | | 3706/15-16 | 17.81 |
| 6 | | 3718/15-16 | 59.37 |
| 7 | | 3723/15-16 | 5.94 |
| 8 | | 3747/15-16 | 9.50 |
| 9 | | 3721/15-16 | 37.99 |
| | | Total | **1299.12** |

ಈ ಕುರಿತು ಜಿಲ್ಲಾನೋಂದಣಾಧಿಕಾರಿಗಳು ಉಲ್ಲೇಖ (3) ರಲ್ಲಿ ನೀವು ದಸ್ತಾವೇಜುಗಳನ್ನು ನೋಂದಾಯಿಸುವ ವೇಳೆ ಅಪಮೌಲ್ಯಗೊಳಿಸಿರುತ್ತಾರೆಂದು ನಿರ್ಣಯಿಸಿ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 46ಎ ಮತ್ತು ನೋಂದಣಿ ಕಾಯ್ದೆ 1908 ರ ಕಲಂ 80ಎ ರಡಿ ಪ್ರಕರಣ ದಾಖಲಿಸಿಕೊಂಡು ಕೊರತೆ ಶುಲ್ಕ ಒಟ್ಟು ರೂ.12,91,70,763/- ಗಳನ್ನು ಸಂಬಂಧಪಟ್ಟ ಪಕ್ಷಕಾರರಿಂದ ವಸೂಲಾಯಿಸಲು ಆದೇಶಿಸಿರುತ್ತಾರೆ.

ಉಲ್ಲೇಖ (4) ರಲ್ಲಿ ಈ ಕುರಿತು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಎನ್.ರವಿಕುಮಾರ್ ರವರು ಸರ್ಕಾರಕ್ಕೆ ನಷ್ಟವಾದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ಸಂಬಂಧಪಟ್ಟ ಅಧಿಕಾರಿಯಿಂದಲೇ ವಸೂಲು ಮಾಡಲು ಯಾವ ಕ್ರಮ ಕೈಗೊಂಡಿದೆ? ಸದರಿ ಅಧಿಕಾರಿಯನ್ನು ಅಮಾನತ್ತು ಮಾಡಲಾಗಿದೆಯೇ ಎಂದು ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:314 ರಲ್ಲಿ ಮಾನ್ಯ ಕಂದಾಯ ಸಚಿವರನ್ನು ಕೋರಿರುತ್ತಾರೆ.

ಮೇಲೆ ತಿಳಿಸಿದ 09 ದಸ್ತಾವೇಜುಗಳಲ್ಲಿ ಮಾರ್ಗಸೂಚಿ ಬೆಲೆಯನ್ನು ಅನುಸರಿಸದೇ ಅಪಮೌಲ್ಯಗೊಳಿಸಿ ಹಾಗೂ ನಿಮ್ಮ ನಿರ್ಲಕ್ಷತೆಯಿಂದ ದಸ್ತಾವೇಜಗಳನ್ನು ನೋಂದಣಿ ಮಾಡಿ ಸರ್ಕಾರಕ್ಕೆ ಒಟ್ಟು ರೂ.12,91,70,763/- ರಷ್ಟು ರಾಜಸ್ವ ನಷ್ಟ ಉಂಟು ಮಾಡಿರುತ್ತೀರಿ. ಇದರಲ್ಲಿ ನಿಮ್ಮ ಬೇಜವಾಬ್ದಾರಿತನ ಮತ್ತು ಕರ್ತವ್ಯ ನಿರ್ಲಕ್ಷತನ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದ್ದರಿಂದ ಶ್ರೀ ವಿಷ್ಣುತೀರ್ಥ ಉಪನೋಂದಣಾಧಿಕಾರಿಗಳು ಬೆಳಗಾವಿ ಆದ ನಿಮ್ಮಿಂದಲೇ ಏಕೆ ಕರ್ನಾಟಕ ನೋಂದಣಿ ನಿಯಮ 1965 ರ ನಿಯಮ 170 ರಡಿ ಕೊರತೆ ಮೊತ್ತವನ್ನು ವಸೂಲು ಮಾಡಬಾರದು ಹಾಗೂ ನಿಮ್ಮನ್ನು ಸೇವೆಯಿಂದ ಏಕೆ ಅಮಾನತ್ತುಗೊಳಿಸಬಾರದು? ಎಂಬುದರ ಬಗ್ಗೆ 07 ದಿನಗಳ ಒಳಗಾಗಿ ಈ ಕಛೇರಿಗೆ ನಿಮ್ಮ ಸಮಜಾಯಿಷಿಯನ್ನು ಸಲ್ಲಿಸಲು ಸೂಚಿಸಿದೆ.

ಸದರಿ ಅವಧಿ ಒಳಗಾಗಿ ನಿಮ್ಮಿಂದ ಯಾವುದೇ ಉತ್ತರ ಬಾರದಿದ್ದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ಹೇಳುವುದು ಏನೂ ಇಲ್ಲವೆಂದು ತಿಳಿದು ಸದರಿ ಕೊರತೆ ಮೊತ್ತಕ್ಕೆ ನಿಮ್ಮನ್ನು ಹೊಣೆಗಾರರನ್ನಾಗಿಸಿ ಅಂತಿಮ ಆದೇಶ ನೀಡಲಾಗುವುದು.

30/1/24

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

ಇವರಿಗೆ ,

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿಗಳು, ಉಪನೋಂದಣಿ ಕಛೇರಿ ಬೆಳಗಾವಿ.